# ಕರ್ನಾಟಕ ರಾಜ್ಯ ಮಾನವ ಹಕ್ಕುಗಳ ಆಯೋಗ
## ಬೆಂಗಳೂರು
## ಹೆಚ್.ಆರ್.ಸಿ.ಸಂಖ್ಯೆ:3174/10/31/2019(**SB**–3)
## ದಿನಾಂಕ: 05–03–2021.
## ಉಪಸ್ಥಿತರು: ಶ್ರೀ ಆರ್.ಕೆ.ದತ್ತ, ಮಾನ್ಯ ಸದಸ್ಯರು

**ದೂರುದಾರರು:**

ಶ್ರೀ ಟ್ರಾಯ್ಡಾನ್ ಜೇಮ್ಸ್ ಕೊಲಾಕೊ ಬಿನ್ ಜೋಸೆಫ್ ಮ್ಯಾಕ್ಸಿಮ್ ಕೊಲಾಕೊ,
ನಂ.36, 16ನೇ ಅಡ್ಡ ರಸ್ತೆ,
ಕನಕನಗರ, ಆರ್.ಟಿ. ನಗರ ಅಂಚೆ,
ಬೆಂಗಳೂರು–560 032.

## ಆದೇಶ

ಶ್ರೀ ಟ್ರಾಯ್ಡಾನ್ ಜೇಮ್ಸ್ ಕೊಲಾಕೊ ರವರ ದೂರಿನ ಸಾರಾಂಶವೇನೆಂದರೆ ಅವರ ಮನೆಯ ಹತ್ತಿರವಿರುವ ಕಾಲುದಾರಿಯಲ್ಲಿ ಶ್ರೀ ಸತೀಶ್ ರವರು ಜಿಲೇಬಿ ವ್ಯಾಪಾರ ಮಾಡುತ್ತಿದ್ದು, ಆ ಕಾಲುದಾರಿಯಲ್ಲಿ ಜಿಲೇಬಿ ವ್ಯಾಪಾರ ಮಾಡುವುದರಿಂದ ಪಾದಚಾರಿಗಳಿಗೆ ಹಾಗೂ ನೆರೆಹೊರೆಯವರಿಗೆ ಅಡಚಣೆ ಉಂಟಾಗುತ್ತದೆಂದು ದೂರುದಾರರ ಸಹೋದರ ಹಾಗೂ ಅವರ ತಾಯಿಯವರು ವಿರೋಧ ವ್ಯಕ್ತಪಡಿಸಿದ್ದು, ಈ ವಿಚಾರವಾಗಿ ಸ್ವಲ್ಪ ಘರ್ಷಣೆ ಉಂಟಾಗಿದ್ದು, ಆ ಸಮಯದಲ್ಲಿ ದೂರುದಾರರ ತಾಯಿಯ ಮೊಬೈಲ್ ಕಳೆದುಹೋಗಿರುತ್ತದೆಂದು, ಈ ವಿಚಾರದ ಬಗ್ಗೆ ಪೋಲೀಸರು ಬಂದು ದೂರುದಾರರ ಸಹೋದರನಿಗೆ ಮೊಬೈಲ್ ಕಳೆದುಹೋಗಿರುವುದಕ್ಕೆ ಠಾಣೆಗೆ ಬಂದು ದೂರು ನೀಡಲು ಸೂಚಿಸಿ, ದೂರುದಾರರ ಸಹೋದರನನ್ನು ಹೋಯ್ಸಳದಲ್ಲಿ ಕರೆದುಕೊಂಡು ಠಾಣೆಗೆ ಹೋಗಿರುತ್ತಾರೆಂದು ದೂರುದಾರರ ತಾಯಿಯು ದೂರುದಾರರಿಗೆ ವಿಷಯವನ್ನು ತಿಳಿಸಿದಾಗ ದೂರುದಾರರು ಠಾಣೆಗೆ ಹೋಗಿ ಅವರ ಸಹೋದರನನ್ನು ನೋಡಲು ಹೋದಾಗ, ಠಾಣೆಯಲ್ಲಿರುವ ಶ್ರೀ ಸಿದ್ದರಾಜು ಎ.ಎಸ್.ಐ ರವರು ಹಾಗೂ ಶ್ರೀ ಗಣೇಶ್ ಆಚಾರಿ ಎ.ಎಸ್.ಐ ರವರು ದೂರುದಾರರ ಜೊತೆ ಮಾತನಾಡಲು ಬಿಟ್ಟಿರುವುದಿಲ್ಲವೆಂದು ಅದನ್ನು ಕೇಳಿದ್ದಕ್ಕೆ ದೂರುದಾರರನ್ನು ಬೈದು ಅವರ ಮೇಲೆ ಹಲ್ಲೆ ಮಾಡಿ ದೂರುದಾರರ ವಿರುದ್ದವೇ ಸುಳ್ಳು ದೂರನ್ನು ದಾಖಲಿಸಿ, ದೂರುದಾರರನ್ನು ವೈದ್ಯಕೀಯ ತಪಾಸಣೆಗೆ ಒಳಪಡಿಸಿದಾಗ ಅದರ ವರದಿಯನ್ನು ಅವರಿಗೆ ನೋಡಲು ಕೊಟ್ಟಿರುವುದಿಲ್ಲವೆಂದು, ಹಾಗೂ ಅವರ ವಿರುದ್ಧ ಸುಳ್ಳು ಪ್ರಕರಣ ಮೊ.ಸಂ.196/2019 ಕಲಂ–504, 353ರ ಐ.ಪಿ.ಸಿಯನ್ನು ದಾಖಲಿಸಿ, ದೂರುದಾರರನ್ನು ಜೈಲಿಗೆ ಕಳುಹಿಸಿದ್ದು, ಇದರಿಂದ ದೂರುದಾರರಿಗೆ ಹಾಗೂ ಅವರ ಕುಟುಂಬದವರ

ಹೆಸರಿಗೆ ಕಳಂಕವಾಗಿರುತ್ತದೆಂದು, ಆ ಮೊ.ಸಂ.196/2019 ಸುಳ್ಳು ಪ್ರಕರಣವನ್ನು ಮುಕ್ತಾಯಗೊಳಿಸಿ ದೂರುದಾರರ ಮೇಲೆ ಹಲ್ಲೆ ಮಾಡಿ ಸುಳ್ಳು ಕೇಸು ದಾಖಲಿಸಿ, ಅಕ್ರಮ ಬಂಧನದಲ್ಲಿಟ್ಟು, ಜೈಲಿಗೆ ಕಳುಹಿಸಿದವರ ವಿರುದ್ಧ ಸೂಕ್ತ ಕಾನೂನು ಕ್ರಮ ಜರುಗಿಸುವಂತೆ ದೂರು ಸಲ್ಲಿಸಿದ್ದಾರೆ.

ಈ ದೂರಿನ ಪ್ರತಿಯನ್ನು ಉಪ ಪೊಲೀಸ್ ಆಯುಕ್ತರು, ಪೂರ್ವ ವಿಭಾಗ, ಬೆಂಗಳೂರು ರವರಿಗೆ ವರದಿಗಾಗಿ ಕಳುಹಿಸಿದ್ದು, ಅದರಂತೆ ಸದರಿಯವರ ವರದಿಯೊಂದಿಗೆ ಪೊಲೀಸ್ ಇನ್ಸ್‌ಪೆಕ್ಟರ್, ಡಿ.ಜೆ ಹಳ್ಳಿ ಪೊಲೀಸ್ ಠಾಣೆ, ಬೆಂಗಳೂರು ರವರ ವರದಿ ಹಾಗೂ ಇನ್ನಿತರೇ ದಾಖಲೆಗಳನ್ನು ಸಲ್ಲಿಸಿರುತ್ತಾರೆ.

ಸದರಿಯವರ ವರದಿಯಲ್ಲಿ, ಶ್ರೀ ಗಣೇಶ್ ಆಚಾರಿ ಎ.ಎಸ್.ಐ ರವರನ್ನು ವಿಚಾರಿಸಲಾಗಿ, ಪ್ರಕರಣದ ಕುರಿತು ದಾಖಲಾದ ಎನ್.ಸಿ.ಆರ್ ನಂ.615/2019ರ ವಿಚಾರಣೆಗಾಗಿ ಎದುರುದಾರರಾದ ಶ್ರೀ ಸತೀಶ್ ಮತ್ತು ದೂರುದಾರರ ಸಹೋದರ ಜಿಮ್ ಟೆರೆನ್ಸ್ ಕೊಲಾಕೊ ಅವರನ್ನು ವಿಚಾರಣೆ ಮಾಡುತ್ತಿರುವಾಗ ದೂರುದಾರರು ಮದ್ಯಪಾನ ಮಾಡಿಕೊಂಡು ಠಾಣೆಗೆ ಬಂದು, ಅವರ ಸಹೋದರನನ್ನು ಠಾಣೆಗೆ ಕರೆಸಿದ್ದರ ಬಗ್ಗೆ ಕೋಪಗೊಂಡು ಠಾಣೆಯ ಸಿಬ್ಬಂದಿಯಾದ ಎ.ಎಸ್.ಐ ಶ್ರೀ ಸಿದ್ದರಾಜು ಎಂಬುವವರ ಮೇಲೆ ಏರುಧ್ವನಿಯಲ್ಲಿ ಗಲಾಟೆ ಮಾಡುತ್ತಾ ಅವಾಚ್ಯ ಶಬ್ದಗಳಿಂದ ನಿಂದನೆ ಮಾಡಿರುತ್ತಾರೆ. ನಂತರ ಎ.ಎಸ್.ಐ ಶ್ರೀ ಸಿದ್ದರಾಜು ರವರು ದೂರುದಾರರು ಸಾರ್ವಜನಿಕ ಕರ್ತವ್ಯಕ್ಕೆ ಅಡ್ಡಿಪಡಿಸಿ ಅವಾಚ್ಯ ಶಬ್ದಗಳಿಂದ ನಿಂದಿಸಿರುವ ಬಗ್ಗೆ ಸೂಕ್ತ ಕ್ರಮಕ್ಕಾಗಿ ವರದಿ ನೀಡಿರುವ ಮೇರೆಗೆ ದೂರುದಾರರಾದ ಶ್ರೀ ಟ್ರಾಯ್ಡಾನ್ ಜೇಮ್ಸ್ ಕೊಲಾಕೊ ರವರನ್ನು ವೈದ್ಯಕೀಯ ತಪಾಸಣೆಗೆ ಒಳಪಡಿಸಿ ಅವರ ವಿರುದ್ಧ ಮೊ.ಸಂ.196/2019 ಕಲಂ 504, 353 ಐಪಿಸಿ ರೀತ್ಯ ಪ್ರಕರಣ ದಾಖಲಿಸಿ ದಸ್ತಗಿರಿ ಮಾಡಿ ನ್ಯಾಯಾಲಯದ ಮುಂದೆ ಹಾಜರುಪಡಿಸಿ, ನ್ಯಾಯಾಂಗ ಅಭಿರಕ್ಷೆಗೆ ಒಳಪಡಿಸಿರುತ್ತದೆ. ಸದರಿ ಪ್ರಕರಣವು ತನಿಖೆಯಲ್ಲಿದ್ದು, ಶೀಘ್ರದಲ್ಲಿ ತನಿಖೆ ಪೂರ್ಣಗೊಳಿಸಿ, ನ್ಯಾಯಾಲಯಕ್ಕೆ ಅಂತಿಮ ವರದಿ ನೀಡಲಾಗುವುದೆಂದು ವರದಿ ಮಾಡಿರುತ್ತಾರೆ.

ಸದರಿ ವರದಿಯ ಪ್ರತಿಯನ್ನು ದೂರುದಾರರ ಅಭಿಪ್ರಾಯಕ್ಕಾಗಿ ಕಳುಹಿಸಲಾಗಿ, ದೂರುದಾರರಿಗೆ ಮದ್ಯಪಾನ ಮಾಡಿರುವ ಬಗ್ಗೆ ಯಾವುದೇ ವೈದ್ಯಕೀಯ ತಪಾಸಣೆ ಮಾಡಿರುವುದಿಲ್ಲವೆಂದು ಹಾಗೂ ಘಟನೆಯ ಬಗ್ಗೆ ನೈಜ ಸಂಗತಿ ತಿಳಿದಿರುವ ದೂರುದಾರರ ಸಹೋದರನಾದ ಜಿಮ್ ಟೆರೆನ್ಸ್ ಕೊಲಾಕೊ ಹಾಗೂ ಅವರ ಪಕ್ಕದ ಮನೆಯ ಸಾತ್ವಿಕ್ ರವರುಗಳನ್ನು ವಿಚಾರಣೆ ಮಾಡದೇ ಸುಳ್ಳು ವರದಿ ನೀಡಿರುತ್ತಾರೆಂದು ಅಭಿಪ್ರಾಯ ಸಲ್ಲಿಸಿರುತ್ತಾರೆ.

ಆದುದರಿಂದ ಮಾನವ ಹಕ್ಕುಗಳ ರಕ್ಷಣಾ ಕಾಯ್ದೆ 1993ರ ಕಲಂ 13(ಎ)ರ ಅಡಿ ಆಯೋಗದ ಮುಂದೆ ದಾಖಲೆಗಳೊಂದಿಗೆ ಖುದ್ದಾಗಿ ಹಾಗರಾಗಬೇಕೆಂದು 1. ಶ್ರೀ ಕೇಶವ ಮೂರ್ತಿ, ಪೊಲೀಸ್

ಇನ್ಸ್‌ಪೆಕ್ಟರ್; 2. ಶ್ರೀ ಗಣೇಶ್ ಆಚಾರಿ, ಎ.ಎಸ್.ಐ, 3. ಶ್ರೀ ಸಿದ್ದರಾಜು, ಎ.ಎಸ್.ಐ, ಡಿ.ಜೆ.ಹಳ್ಳಿ ಪೊಲೀಸ್ ಠಾಣೆ ಮತ್ತು ದೂರುದಾರರಾದ ಶ್ರೀ ಟ್ರಾಯ್ಡಾನ್ ಜೇಮ್ಸ್ ಕೊಲಾಕೊ ರವರು ಜಿಮ್ ಟೆರೆನ್ಸ್ ಕೊಲಾಕೊ ಹಾಗೂ ಸಾತ್ವಿಕ್ ರವರುಗಳನ್ನು ಕರೆದುಕೊಂಡು ವಿಚಾರಣೆಗೆ ಹಾಜರಾಗಬೇಕೆಂದು ನೋಟಿಸ್ ಜಾರಿ ಮಾಡಲಾಗಿದ್ದು, ಅದರಂತೆ, ದಿನಾಂಕ 17-02-2020 ರಂದು ದೂರುದಾರರಾದ ಶ್ರೀ ಟ್ರಾಯ್ಡಾನ್ ಜೇಮ್ಸ್ ಕೊಲಾಕೊ, ಸಹೋದರನಾದ ಶ್ರೀ ಜಿಮ್ ಟೆರೆನ್ಸ್ ಕೊಲಾಕೊ ಹಾಗೂ ಸಾತ್ವಿಕ್ ಮತ್ತು ಮೇಲೆ ಹೇಳಲಾದ ಪೊಲೀಸ್ ಅಧಿಕಾರಿಗಳು ಆಯೋಗದ ಮುಂದೆ ಹಾಜರಾಗಿದ್ದು, ಶ್ರೀ ಟ್ರಾಯ್ಡಾನ್ ಜೇಮ್ಸ್ ಕೊಲಾಕೊ, ಶ್ರೀ ಜಿಮ್ ಟೆರೆನ್ಸ್ ಕೊಲಾಕೊ ಹಾಗೂ ಸಾತ್ವಿಕ್ ರವರುಗಳು ಅವರ ಲಿಖಿತ ಹೇಳಿಕೆಗಳನ್ನು ಸಲ್ಲಿಸಿರುತ್ತಾರೆ ಹಾಗೂ ಪೊಲೀಸ್ ಅಧಿಕಾರಿಗಳು ಅವರ ಹೇಳಿಕೆಗಳನ್ನು ನೀಡಿರುತ್ತಾರೆ.

ಶ್ರೀ ಟ್ರಾಯ್ಡಾನ್ ಜೇಮ್ಸ್ ಕೊಲಾಕೊ ರವರು ಅವರ ದೂರರ್ಜಿಯಲ್ಲಿ ಮಾಡಿರುವ ಅಪಾದನೆಗಳನ್ನು ಪುನಃ ಲಿಖಿತ ಹೇಳಿಕೆಯ ಮೂಲಕ ಸಲ್ಲಿಸಿರುತ್ತಾರೆ.

ಶ್ರೀ ಜಿಮ್ ಟೆರೆನ್ಸ್ ಕೊಲಾಕೊ ರವರ ಲಿಖಿತ ಹೇಳಿಕೆಯ ಸಂಬಂಧಿತ ಸಾರ ಈ ಕೆಳಕಂಡಂತೆ ಇದೆ:

> *"5. .... my brother Troydon James Colaco entered the Police Station and proceeded to talk to me regarding the incident. Due to the nature of the incident my brother was worried about my health and whether I suffered any injuries. While our conversation was ongoing, ASI Siddaraju intervened in a hostile manner and misbehaved with my brother. We informed the ASI of our relationship and his concern but he continued the hostility. Meanwhile, ASI Ganesh Acharya where we stood inside the Police Station and held and twisted the hand of my brother. Since he did this, my brother instructed ASI Ganesh Acharya not to touch him in a distressed voice. This apparently aggravated the ASIs and they falsely accused my brother to be under the influence of alcohol and said they will take him to be tested.*

*6. I was not allowed to talk to my brother and none of the policemen in the station were willing to hear me out. Meanwhile, my brother was taken to a doctor where no tests were conducted to prove that he was under the influence of alcohol. My brother was brought back to the station and he told me that there was no blood extracted nor was there any breathalyzer test done.*

*7. Mr. Sathwick has also witnessed the same and my brother was illegally detained in the Police Station for the duration of the night followed by the next day as well till 7:30PM on 5th August 2019. Both Mr. Satwick and myself were sitting inside the station till 7:00PM on 5th August, 2019...*

*8. My brother has suffered under the blatant abuse of power and authority of ASI Ganesh Acharya and ASI Siddaraju. To add to this, now they have filed a false case before this body blaming my brother for the incident...."*

ಶ್ರೀ ಸಾತ್ವಿಕ್ ರವರ ಲಿಖಿತ ಹೇಳಿಕೆಯ ಸಂಬಂಧಿತ ಸಾರ ಈ ಕೆಳಕಂಡಂತೆ ಇದೆ:

*"3. I was waiting with Mr. Jim for the ASI Ganesh Acharya to take the complaint and file an FIR. Meanwhile I saw Mr. Troydon James Colaco entering the station. I first told him how the police had made Mr. Jim to wait for about 45 minutes and were not ready to take his complaint yet. He then proceeded to talk to his brother and I saw ASI Siddaraju shouting at him. We all tried to tell the ASI that they were brothers and were talking about the incident but ASI Siddaraju was being unnecessarily hostile.*

4. Meanwhile ASI Ganesh Acharya Intervened and caught Mr. Troydon's arm and twisted it. Due to the pain Mr. Troydon loudly asked ASI Ganesh Acharya not to touch him. Then ASI Siddaraju and ASI Ganesh Acharya falsely accused Mr. Troydon of being under the influence of alcohol.

We were told that he will be taken for a medical test and when he was brought back Mr. Troydon clearly mentioned that no blood was extracted nor was there a breathalyzer test conducted.

*5. After this the Police illegally detained Mr. Troydon till 7:30PM on 5th August, 2019 when they took him to appear before the magistrate. I was with Mr. Jim in the station premises till 7:00 PM on 5th August, 2019 and am witness to all the police atrocities. I hereby state that this is the true course of events and request that the KSHRC take suitable action on the guilty police officials."*

ದಿನಾಂಕ 17–02–2020 ರಂದು ಶ್ರೀ ಕೇಶವ ಮೂರ್ತಿ, ಪೊಲೀಸ್ ಇನ್ಸ್‌ಪೆಕ್ಟರ್, ಡಿ.ಜೆ. ಹಳ್ಳಿ ಪೊಲೀಸ್ ಠಾಣೆ ರವರು ಆಯೋಗದ ಮುಂದೆ ನೀಡಿರುವ ಹೇಳಿಕೆಯು ಈ ಕೆಳಕಂಡಂತೆ ಇದೆ:

*"... On 04.08.2019 I was in the police station till about 8.00-8.15 P.M........ At 11.00-11.15 P.M. when I returned to the police station there were 10-15 people outside the police station. At that time Sri Ganesha Achari A.S.I. came and told that there was a galata in Kanakanagara and the Hoysala has brought the complainant Sri Sathish to police station and on his complaint N.C.R. No. 615/2019 has been takenup. On further enquiry it was told that Mr. Troydon James Colaco has used vulgar words against A.S.I., Siddaraju and pushed him catching hold of his uniform. I had called the opposite party Troydon James Colaco and made enquiry. I also made enquiry with Sri Sathish and others who also stated about the galata made by Troydon James Colaco in the police station. I also learnt that medical examination of Troydon James Colaco was done and the doctor had reported that Troydon James Colaco was under influence of alcohol I then told A.S.I. Sri Ganesh Achari to take the complaint of Sri Siddaraju and register an F.I.R. Thereafter, Mr. Troydon James Colaco was arrested and then I left for night rounds. On being questioned whether I had enquired with Sri Troydon James Colaco or only shouted at him and told his staff to put him inside the lockup, I state*

*that I had made enquiries. On being questioned that the public who had come to police station where on behalf of Sri Sathish, I state that the public were on behalf of both the parties. I also state that I was unable to make enquiries with Mr. Troydon James Colaco as he was drunk and was not in a condition to give reply."*

ದಿನಾಂಕ 17-02-2020 ರಂದು ಶ್ರೀ ಸಿದ್ದರಾಜು, ಎ.ಎಸ್.ಐ, ಡಿ.ಜೆ. ಹಳ್ಳಿ ಪೊಲೀಸ್ ಠಾಣೆ ರವರು ಆಯೋಗದ ಮುಂದೆ ನೀಡಿರುವ ಹೇಳಿಕೆಯು ಈ ಕೆಳಕಂಡಂತೆ ಇದೆ:

*"On 04.08.2019 there was a commotion between Jilebi seller Sri Satish and Jim Terrence Colaco. Thereafter a complaint was given by Sri Satish to which NCR No.615/19 was registered. After sometime Troydon James Colaco came to the Police Station and he spoke to his brother as to what happened and thereafter he wanted to take his brother out of police station. At that point, I told Troydon James Colaco that an NC has been registered and enquiry has to be done and thereafter he should sit. But Troydon Colaco started shouting and pushed me as he was under the influence of alcohol. Troydon was then sent along with police Constable 14075 Moisin Mukari and PC 16772, Shivakumar to Dr B.R Ambedkar Hospital for medical examination. Dr. Sudhakar after examining him has given a certificate mentioning "Patient is under the influence of alcohol". As Troydon James Colaco had tried to take his brother, pushed me and Ganesha Achari I had given a complaint on which a case in Crime No: 196/2019 u/s 504 and 353 IPC was registered by Ganesh Achari, ASI and the investigation of case has been entrusted to Sri Venkateshwara urs, ASI.*

## ***Cross Examination of Sri Siddaraju, ASI***

*On being questioned whether Jim Terrence Colaco come to the police Station at about 07.30 p.m to lodge a complaint and he met Sri.Siddaraju. Sri Siddaraju stated that I had come to the Police Station at 08.30*

*P.M and I was not present in Police Station before that."*

ದಿನಾಂಕ 17-02-2020 ರಂದು ಶ್ರೀ ಗಣೇಶ್ ಆಚಾರಿ, ಎ.ಎಸ್.ಐ, ಡಿ.ಜೆ. ಹಳ್ಳಿ ಪೊಲೀಸ್ ಠಾಣೆ ರವರು ಆಯೋಗದ ಮುಂದೆ ನೀಡಿರುವ ಹೇಳಿಕೆಯು ಈ ಕೆಳಕಂಡಂತೆ ಇದೆ:

*"On 04.08.2019, I had taken charge of the police station after evening roll call after 08.30 P.M. At that time Sri Satish, Jilebi seller had given a complaint that he was beaten up by Jim Terrence Colaco in the evening at 06.30 P.M for keeping his shop on a footpath at Kanakanagara and that he should be called and necessary enquiries made. I had then registered NCR No. 615/2019 on this complaint at about 21:55 hours. Thereafter at 22:15 hours I registered a case in Crime No: 196/2019 U/s 504 & 353 IPC on a complaint of Sri Siddaraju, ASI about Troydon James Colaco having spoken to Sri Siddaraju ASI in loud voice and also pushing him catching hold of his uniform. I may mention here that before the case was registered, Troydon James Colaco was sent by me to Dr. B.R. Ambedkar Medical College for test as he was under the influence of alcohol. After this Troydon James Colaco was arrested and kept in the police station.*

***<u>Cross examination of Sri Ganesh Achari, ASI</u>***

*On being questioned whether Jim Terrence Colaco has given a complaint or commotion between Jilebi seller and Jim and his mother, I state that Jim Terrence Colaco had not given any complaint to me."*

ದೂರರ್ಜಿ, ವರದಿ, ಅಭಿಪ್ರಾಯ ಹಾಗೂ ಉಭಯ ಪಕ್ಷಗಳ ಹೇಳಿಕೆಗಳನ್ನು ಪರಿಶೀಲನೆ ಮಾಡಿದ್ದು, ದಿನಾಂಕ 04-08-2019 ರಂದು ದೂರುದಾರರಾದ ಶ್ರೀ ಟ್ರಾಯ್ಡಾನ್ ಜೇಮ್ಸ್ ಕೊಲಾಕೊರವರಿಗೆ ವೈದ್ಯಕೀಯ ತಪಾಸಣೆ ಮಾಡಿದ ಡಾ. ಸುಧಾಕರ್, ಡಾ. ಬಿ.ಆರ್. ಅಂಬೇಡ್ಕರ್ ವೈದ್ಯಕೀಯ ಕಾಲೇಜು ರವರಿಗೆ ವೈದ್ಯಕೀಯ ತಪಾಸಣೆ ಮಾಡಿರುವ ಕುರಿತು ವಿಚಾರಣೆ ಮಾಡುವ ಸಲುವಾಗಿ ನೋಟಿಸ್ ಜಾರಿಮಾಡಲು ಹಾಗೂ ಆಯೋಗದ ಡಿವೈ.ಎಸ್.ಪಿ.ಯಾದ ಶ್ರೀ ಮಂಜುನಾಥ್ ರವರಿಗೆ ಆಯೋಗವು ಈ ಕೆಳಕಂಡಂತೆ ಆದೇಶಿಸಿತು:

*"Sri Manjunath Deputy Superintendent of Police, Karnataka State Human Rights Commission has further been entrusted with enquiry with regard to:*

*(I) Checking CCTV Camera at ATM at Kanakagiri where galata took place to see the recording on the day of galata and report.*

*(II) To examine eight witness namely Sri Lokesh, Sri Varun, Sri Vasanth Kumar, Sri Ramesh Sri Manjunath, Sri Vinod Kishore and Srikanth to verify whether they were witnesses to the galata created by Mr Tryodon James Colaco inside the police station as alleged by Sri. Siddaraju, Assistant Sub-Inspector.*

*(III) To check whether the CCTV in PS was not working on 04.08.2019? If so, to enquire whether the PI failed in his duty to maintain CCTV Camera?*

ಅದರಂತೆ, ಆಯೋಗದ ಡಿವೈ.ಎಸ್.ಪಿ.ರವರು ಅವರ ವರದಿಯೊಂದಿಗೆ ಅನುಬಂಧಗಳನ್ನು ಸಲ್ಲಿಸಿರುತ್ತಾರೆ. ಸದರಿಯವರ ವರದಿಯ ಸಂಬಂಧಿತ ಸಾರ ಈ ಕೆಳಕಂಡಂತೆ ಇದೆ:

*"ಒಟ್ಟಾರೆಯಾಗಿ ಮೇಲ್ಕಂಡ ಸಾಕ್ಷೀದಾರರ ಹೇಳಿಕೆಗಳು ಮತ್ತು ದಾಖಲಾತಿಗಳನ್ನು ಪರಿಶೀಲಿಸಲಾಗಿದ್ದು, ದಿನಾಂಕ. 04.08.2019 ರಂದು ಸಂಜೆ ಸುಮಾರು 7.45 ಗಂಟೆ ಸಮಯದಲ್ಲಿ ದೂರುದಾರರು ವಾಸಿಸುವ ಮನೆಯ ಹತ್ತಿರ ಕನಕನಗರ, 16ನೇ ಕ್ರಾಸ್, ನಾಗೇನಹಳ್ಳಿ ಮುಖ್ಯ ರಸ್ತೆ ಬದಿಯ ಫುಟ್‌ಪಾತ್ ಮೇಲೆ ಒಬ್ಬ ವ್ಯಕ್ತಿ ಜಿಲೇಬಿ ತಯಾರು ಮಾಡಿ ವ್ಯಾಪಾರ ಮಾಡುತ್ತಿದ್ದು, ಆ ಸಮಯದಲ್ಲಿ ದೂರುದಾರರ ಸಹೋದರ ಶ್ರೀ ಜೇಮ್ಸ್ ಕೊಲಾಕೊ ಮತ್ತು ಅವರ ತಾಯಿ ರವರುಗಳು ಸದರಿ ಜಿಲೇಬಿ ಮಾಡುವ ವ್ಯಕ್ತಿಯನ್ನು ಇಲ್ಲಿ ಜಿಲೇಬಿ ಮಾಡಬಾರದು, ಟ್ರಾಫಿಕ್ ಜಾಮ್ ಆಗುತ್ತದೆ ಮತ್ತು ನಮಗೆ ಓಡಾಡಲು ತೊಂದರೆಯಾಗುತ್ತದೆ ಎಂದು ಜಗಳ ಮಾಡಿದ್ದು, ಆ ಸಮಯದಲ್ಲಿ ಅಲ್ಲಿಯೇ ಇದ್ದ ಮೇಲ್ಕಂಡ ಸಾಕ್ಷೀದಾರರುಗಳು ಸ್ಥಳಕ್ಕೆ ಹೋಗಿ ವಿಚಾರ ಮಾಡಿದಾಗ ಜಿಲೇಬಿ ಹಾಕುತ್ತಿದ್ದ ವ್ಯಕ್ತಿ ಮತ್ತು ದೂರುದಾರರ ಸಹೋದರ ಹಾಗೂ ಸಾಕ್ಷೀದಾರರುಗಳ ನಡುವೆ ಮಾತಿಗೆ ಮಾತು ಬೆಳೆದು ಜಗಳವಾಗಿದ್ದು, ಈ ವಿಷಯ ತಿಳಿದು ಸ್ಥಳಕ್ಕೆ ಬಂದ ಡಿ.ಜೆ ಹಳ್ಳಿ ಪೊಲೀಸರು ಜಿಲೇಬಿ ಹಾಕುತ್ತಿದ್ದ ವ್ಯಕ್ತಿ ಮತ್ತು ಆತನ ವಿರುದ್ಧ ಜಗಳ ಮಾಡಿದ ವ್ಯಕ್ತಿಯನ್ನು ಹೊಯ್ಸಳ ವಾಹನದಲ್ಲಿ ಠಾಣೆಗೆ ಕರೆದುಕೊಂಡು ಹೋಗಿದ್ದು, ನಂತರ ಸಾಕ್ಷೀದಾರರುಗಳು ಸಹ ಠಾಣೆಗೆ ಹೋಗಿದ್ದು ಜಗಳ ಮಾಡಿದ ವ್ಯಕ್ತಿಯ ವಿರುದ್ಧ ಶ್ರೀ ಸತೀಶ್ ಡಿ.ಜೆ.*

ಎಂಬುವವರು ನೀಡಿದ ದೂರಿನ ಮೇರೆಗೆ ಎ.ಎಸ್.ಐ ಶ್ರೀ ಗಣೇಶ ಆಚಾರಿ, ರವರು ದೂರನ್ನು ಪಡೆದು ಎನ್.ಸಿ.ಆರ್ ನಂ.615/2019 ರಲ್ಲಿ ಪ್ರಕರಣ ದಾಖಲಿಸಿಕೊಂಡಿರುತ್ತಾರೆ. ಆ ಸಮಯದಲ್ಲಿ ಠಾಣೆಗೆ ಹಾಜರಾದ ದೂರುದಾರರಾದ ಶ್ರೀ ಟ್ರೈಡಾನ್ ಜೇಮ್ಸ್ ಕೊಲಾಕೊ ರವರು ತನ್ನ ಅಣ್ಣನನ್ನು ಪೊಲೀಸ್ ಠಾಣೆಗೆ ಕರೆದುಕೊಂಡು ಬಂದಿರುವ ಬಗ್ಗೆ ಕೋಪಗೊಂಡು ಏರು ಧ್ವನಿಯಲ್ಲಿ ಮಾತನಾಡಿದ್ದು, ಈ ಬಗ್ಗೆ ಠಾಣೆಯಲ್ಲಿದ್ದ ಎಎಸ್ಐ ಶ್ರೀ ಸಿದ್ದರಾಜು ರವರು ವಿಚಾರ ಮಾಡಲು ಹೋದಾಗ ಮದ್ಯಪಾನ ಮಾಡಿ ಠಾಣೆಗೆ ಬಂದ ದೂರುದಾರರಾದ ಟ್ರೈಡಾನ್ ಜೇಮ್ಸ್ ಕೊಲಾಕೊ ರವರು ಅವಾಚ್ಯ ಶಬ್ದಗಳಿಂದ ಬೈದು ಸಮವಸ್ತ್ರ ಹಿಡಿದು ಎಳೆದಾಡಿ, ಕರ್ತವ್ಯಕ್ಕೆ ತೊಂದರೆ ಮಾಡಿದ್ದಾರೆಂದು ಶ್ರೀ ಟ್ರೈಡಾನ್ ಜೇಮ್ಸ್ ಕೊಲಾಕೊ ರವರ ವಿರುದ್ದ ದೂರು ನೀಡಿದ್ದು, ಸದರಿ ದೂರಿಗೆ ಸಂಬಂಧಿಸಿದಂತೆ ಶ್ರೀ ಟ್ರೈಡಾನ್ ಜೇಮ್ಸ್ ಕೊಲಾಕೊ ರವರನ್ನು ಡಾ॥ ಅಂಬೇಡ್ಕರ್ ಮೆಡಿಕಲ್ ಕಾಲೇಜ್ ಮತ್ತು ಆಸ್ಪತ್ರೆ ಇಲ್ಲಿ ತಪಾಸಣೆಗೆ ಒಳಪಡಿಸಿದ್ದು, ವೈದ್ಯರು "Patient is under the influence of alcohol" ಎಂದು ವರದಿ ನೀಡಿದ ಮೇರೆಗೆ ದೂರುದಾರರಾದ ಶ್ರೀ ಟ್ರೈಡಾನ್ ಜೇಮ್ಸ್ ಕೊಲಾಕೊ ರವರ ವಿರುದ್ದ ಠಾಣಾ ಮೊ.ಸಂ:196/2019 ಕಲಂ 504, 353 ಐಪಿಸಿ ರಂತೆ ಪ್ರಕರಣ ದಾಖಲಿಸಿ, ದಸ್ತಗಿರಿ ಕ್ರಮ ಕೈಗೊಂಡು ದಿನಾಂಕ:05.08.2019 ರಂದು ಆರೋಪಿಯನ್ನು ಮಾನ್ಯ ನ್ಯಾಯಾಲಯಕ್ಕೆ ಹಾಜರುಪಡಿಸಿರುವುದು ಹೇಳಿಕೆ ಮತ್ತು ದಾಖಲಾತಿಗಳಿಂದ ಕಂಡು ಬಂದಿರುತ್ತದೆ.

ಘಟನೆ ನಡೆದ ಸ್ಥಳವಾದ ಕನಕನಗರ 16ನೇ ಕ್ರಾಸ್ ಇಲ್ಲಿ ಅಳವಡಿಸಲಾಗಿರುವ ಆಕ್ಸಿಸ್ ಬ್ಯಾಂಕ್ ಎಟಿಎಂ ನ ಮುಂಭಾಗ ಅಳವಡಿಸಿರುವ ಸಿಸಿಟಿವಿ ಕ್ಯಾಮರಾದ ಫೂಟೇಜ್‌ನ್ನು ಒದಗಿಸುವಂತೆ ಆಕ್ಸಿಸ್ ಬ್ಯಾಂಕ್ ಪ್ರಧಾನ ಕಚೇರಿಯವರಿಗೆ ಕೋರಲಾಗಿದ್ದು, ಈ ಬಗ್ಗೆ ಆಕ್ಸಿಸ್ ಬ್ಯಾಂಕ್ ಪ್ರಧಾನ ಕಚೇರಿಯವರು ಸಿಸಿಟಿವಿ ಫೂಟೇಜ್ ಕೇವಲ 90 ದಿನಗಳವರೆಗೆ ಮಾತ್ರ ಲಭ್ಯವಿದೆ. ಈ ಬಗ್ಗೆ ಘಟನೆ ನಡೆದ ಸ್ಥಳದಲ್ಲಿರುವ ಎಟಿಎಂಗೆ ಇಂಜೀನಿಯರ್ ಕಳುಹಿಸಿ ಸದರಿ ಡೇಟಾ ಪರಿಶೀಲಿಸಲಾಗಿದ್ದು, ಸದರಿ ಅವಧಿಯ ಸಿಸಿಟಿವಿ ಫೂಟೇಜ್ ಲಭ್ಯವಿಲ್ಲವೆಂದು ವರದಿ ನೀಡಿರುತ್ತಾರೆ.

ಸದರಿ ಘಟನೆಯ ಬಗ್ಗೆ ಡಿ.ಜೆ ಹಳ್ಳಿ ಪೊಲೀಸ್ ಠಾಣೆಗೆ ಭೇಟಿ ನೀಡಿ, ಠಾಣೆಯಲ್ಲಿ ಅಳವಡಿಸಿರುವ ಸಿಸಿಟಿವಿ ಗಳ ಬಗ್ಗೆ ಹಾಗೂ ಸದರಿ ಘಟನೆಯ ಬಗ್ಗೆ ಶ್ರೀ ಕೇಶವಮೂರ್ತಿ ಎನ್.ಎನ್, ಪೊಲೀಸ್ ಇನ್ಸ್‌ಪೆಕ್ಟರ್ ರವರನ್ನು ವಿಚಾರಣೆ ಮಾಡಲಾಗಿ, ದಿನಾಂಕ:15.12.2018 ರಲ್ಲಿ ದೇವರಜೀವನಹಳ್ಳಿ ಪೊಲೀಸ್ ಠಾಣೆಯ ನೂತನ ಕಟ್ಟಡ ಉದ್ಘಾಟನೆಯಾಗಿರುತ್ತದೆ. ಸದರಿ ಪೊಲೀಸ್ ಠಾಣೆಯು ಹೊಸ ಕಟ್ಟಡದಲ್ಲಿ ಪ್ರಾರಂಭಗೊಂಡ ಅವಧಿಯಿಂದ ಇದುವರೆಗೂ ಸಿ.ಸಿ.ಟಿ.ವಿ ಕ್ಯಾಮರಾವನ್ನು ಠಾಣೆಯಲ್ಲಿ ಅಳವಡಿಸಿರುವುದಿಲ್ಲ. ಆಗಾಗಿ ಘಟನೆಯ ಅವಧಿಯ ಸಿ.ಸಿ.ಟಿ.ವಿ ಫೂಟೇಜ್ ಲಭ್ಯ ಇರುವುದಿಲ್ಲವೆಂದು ವರದಿ ನೀಡಿರುತ್ತಾರೆ."

ತದನಂತರ, ದಿನಾಂಕ 10-08-2020 ರಂದು ಡಾ. ಸುಧಾಕರ್, ಡಾ. ಬಿ.ಆರ್. ಅಂಬೇಡ್ಕರ್ ವೈದ್ಯಕೀಯ ಕಾಲೇಜು ಹಾಗೂ ದೂರುದಾರರಾದ ಶ್ರೀ ಟ್ರಾಯ್ಡಾನ್ ಜೇಮ್ಸ್ ಕೊಲಾಕೊ ಮತ್ತು ಅವರ ಸಹೋದರ ಶ್ರೀ ಜಿಮ್ ಟೆರೆನ್ಸ್ ಕೊಲಾಕೊ ರವರು ಆಯೋಗದ ಮುಂದೆ ಹಾಜರಾಗಿದ್ದು, ಡಾ. ಸುಧಾಕರ್ ರವರು ಅವರ ಹೇಳಿಕೆಯನ್ನು ನೀಡಿದ್ದು ಹಾಗೂ ಶ್ರೀ ಟ್ರಾಯ್ಡಾನ್ ಜೇಮ್ಸ್ ಕೊಲಾಕೊ ರವರು ಅವರ ಮುಂದುವರೆದ ಹೇಳಿಕೆಯನ್ನು ನೀಡಿರುತ್ತಾರೆ.

ಡಾ. ಸುಧಾಕರ್ ರವರು ಅವರ ಹೇಳಿಕೆಯಲ್ಲಿ ದಿನಾಂಕ 04-08-2019 ಭಾನುವಾರವಾಗಿರುವುದರಿಂದ ಅವರು ರಜೆಯಲ್ಲಿದ್ದು, ಅವರು ಟ್ರಾಯ್ಡಾನ್ ಜೇಮ್ಸ್ ರವರನ್ನು ನೋಡಿ ಪರೀಕ್ಷಿಸಿರುವುದಿಲ್ಲವೆಂದು ಹೇಳಿರುತ್ತಾರೆ. ಮುಂದುವರೆದು, ದಿನಾಂಕ 04-08-2019ರಂದು ರಾತ್ರಿ 09.45 ಕ್ಕೆ ಲಭ್ಯವಿರುವ ಕಿರಿಯ ವೈದ್ಯರಲ್ಲಿ ಒಬ್ಬರು, ಟ್ರಾಯ್ಡಾನ್ ಜೇಮ್ಸ್ ರವರನ್ನು ಪರೀಕ್ಷಿಸಿ ಡಾ.ಸುಧಾಕರ್ ರವರ ಪರವಾಗಿ ಸಹಿ ಮಾಡಿ, "Patient under the influence of alcohol" ಎಂದು ಅಭಿಪ್ರಾಯವನ್ನು ನೀಡಿರುತ್ತಾರೆ. ಆದರೆ ಆ ಸಮಯದಲ್ಲಿ ಕಿರಿಯ ವೈದ್ಯರು ಯಾರು ಎಂದು ಅವರಿಗೆ ತಿಳಿದಿಲ್ಲವೆಂದು ಹೇಳಿರುತ್ತಾರೆ.

ಶ್ರೀ ಟ್ರಾಯ್ಡಾನ್ ಜೇಮ್ಸ್ ಕೊಲಾಕೊ ರವರ ಮುಂದುವರೆದ ಹೇಳಿಕೆಯು ಈ ಕೆಳಕಂಡಂತೆ ಇದೆ:

> *"Further to my submission dated 18.01.2020 which I had placed before the Commission on 17.02.2020, I state that on 04.08.2019 after I was taken to Dr. B.R. Ambedkar Hospital and brought back to D.J Halli Police Station, I was told by Sri. Ganesh Achary, Police Asst Sub-Inspector and Sri. Siddaraju, Assistant Sub-Inspector to stay in the Police Station till the Inspector come, Accordingly, I have stayed in the Police Station.*
>
> *Next day i.e., on 05.08.2019 around 4 P.M a case was registered against me and my signature was taken on the F.I.R and thereafter I was taken for medical examination between 05.30 – 06.00 P.M and after that I was produced before the Magistrate around 10.00 P.M. The police person accompanying me kept me at a distance from the Magistrate and told me not to utter anything before the Magistrate......."*

ತದನಂತರ, ಕಲಂ 16ರ ಮಾನವ ಹಕ್ಕುಗಳ ರಕ್ಷಣಾ ಕಾಯ್ದೆ 1993ರ ಅಡಿಯಲ್ಲಿ ಡಿ.ಜೆ ಹಳ್ಳಿ ಪೊಲೀಸ್ ಠಾಣೆಯ 1) ಪೊಲೀಸ್ ಇನ್ಸ್‌ಪೆಕ್ಟರ್ ಶ್ರೀ ಕೇಶವ ಮೂರ್ತಿ, 2) ಶ್ರೀ ಗಣೇಶ್ ಆಚಾರಿ, ಎ.ಎಸ್.ಐ., 3) ಶ್ರೀ ಸಿದ್ದರಾಜು, ಎ.ಎಸ್.ಐ. ರವರುಗಳಿಗೆ ನೋಟೀಸ್ ಜಾರಿ ಮಾಡಲಾಗಿದ್ದು, ಅದರಂತೆ ದೂರುದಾರರು, ಅವರ ಸಹೋದರ ಜಿಮ್ ಟೆರೆನ್ಸ್ ಕೊಲಕೊ ಹಾಗೂ ಸಾತ್ವಿಕ್ ರವರುಗಳು ಆಯೋಗಕ್ಕೆ ಹಾಜರಾಗುವಂತೆ ತಿಳಿಸಿದ್ದು, ದಿನಾಂಕ. 21-09-2020 ರಂದು ಎ.ಎಸ್.ಐ ಶ್ರೀ ಗಣೇಶ್ ಅಚಾರಿ ಹಾಗೂ ಸಿದ್ದರಾಜು ರವರು ಹಾಜರಾಗಿದ್ದು, ಅವರುಗಳು ಈ ಹಿಂದೆ ಆಯೋಗದ ಮುಂದೆ ನೀಡಿದ ಹೇಳಿಕೆಗಳಂತೆ ಅವರ ಹೇಳಿಕೆ ಆಗಿರುತ್ತದೆ ಎಂದು ತಿಳಿಸಿರುತ್ತಾರೆ. ದೂರುದಾರರು, ಅವರ ಸಹೋದರ ಮತ್ತು ಸಾತ್ವಿಕ್ ರವರು ಆಯೋಗದ ಮುಂದೆ ಹಾಜರಾಗಿದ್ದು, ಶ್ರೀ ಸಾತ್ವಿಕ್ ರವರು ಅವರ ಹೇಳಿಕೆಯನ್ನು ನೀಡಿರುತ್ತಾರೆ. ಶ್ರೀ ಸಾತ್ವಿಕ್ ರವರ ಹೇಳಿಕೆಯು ಈ ಕೆಳಕಂಡಂತೆ ಇದೆ:

> *"I am a neighbour of Sri Jim Terence Colaco, on 04.08.2019 at about 7 P.M When I was returning home with my father, I saw some 15 people who are the supporters of Jilebi seller were attacking Sri Jim Terence Colaco and his mother. In the galata, Jim Terence Colaco's mother lost her mobile. I had also searched for the mobile with Jim, but could not find and we called the police to lodge complaint about missing of mobile. A police personnel by name Sri Vittal had come to the spot and told that we have to come to the police station to lodge a complaint. I then went in the Hoysala, reached D.J Halli PS with Sri Jim Terence Colaco. When we reached police station, I found the police station filled with people who had attacked Sri Jim Terence Colaco and his mother. We had gone to lodge the complaint for the missing mobile. But, the people who were there in the police station started questioning our presence in the police station. Sri Jim Terence Colaco was not able to stand properly as he had sustained injuries to his leg. Later, Sri Troydon James Colaco also came to the police station. Sri Troydon James Colaco wanted to talk to his brother Sri Jim Terence Colaco, but he was not allowed to do so by Sri Ganesh Achari, ASI. I do not know whether Sri Troydon James Colaco had consumed drinks. I*

*saw Sri Troydon James Colaco being prevented by Sri Ganesh Achari for meeting his brother by holding his hands. Later, I saw Sri Troydon James Colaco was taken for medical examination. On being asked whether Sri Troydon James Colaco had pushed Sri Ganesh Achari and Sri Siddaraju, I state that I did not see any such thing. I saw that there was an argument between Sri Troydon James Colaco and Sri Ganesh Achari as Sri Troydon James Colaco wanted to talk to his brother. Thereafter, Sri Troydon James Colaco was taken for medical examination."*

ಮುಂದುವರೆದು, ಮೊ.ಸ. 196/2019 ರ ನೋಂದಣಿ ಮಾಡಿರುವ ಬಗ್ಗೆ ದೂರುದಾರರು ಹಾಗೂ ಅವರ ಸಹೋದರ ವಿವಾದ ವ್ಯಕ್ತಪಡಿಸಿದ್ದು, ದಿನಾಂಕ 05-08-2019ರಂದು ಎಫ್.ಐ.ಆರ್. ನೋಂದಣಿ ಮಾಡಿರುತ್ತಾರೆಂದು ಹೇಳಿರುತ್ತಾರೆ. ಹಾಗೂ ದಿನಾಂಕ 05-08-2019ರಂದು ದೂರುದಾರರ ಸ್ನೇಹಿತ ಶ್ರೀ ಚೇತನ್ ಹಿರೇಮಠ್ ರವರು ಅವರ ಸ್ನೇಹಿತ ಶ್ರೀ ವಿಪಿನ್ ಗುಲ್ವಾಡಿರವರೊಂದಿಗೆ ಪೊಲೀಸ್ ಠಾಣೆಗೆ ಬಂದು, ಪೊಲೀಸ್ ಇನ್ಸ್‌ಪೆಕ್ಟರ್ ರವರೊಂದಿಗೆ ಶ್ರೀ ಸಿದ್ದರಾಜುರವರು ನೀಡಿರುವ ದೂರನ್ನು ಹಿಂಪಡಿಯುವಂತೆ ಮನವಿ ಮಾಡಿದ್ದು, ಇದರ ಬಗ್ಗೆ ಪೊಲೀಸ್ ಇನ್ಸ್‌ಪೆಕ್ಟರ್‌ರವರು ಚೇತನ್‌ರವರಿಗೆ ಶ್ರೀ ಸಿದ್ದರಾಜುರವರನ್ನು ಭೇಟಿಮಾಡಲು ಹೇಳಿರುತ್ತಾರೆಂದು ದೂರುದಾರರು ಆಯೋಗದ ಮುಂದೆ ತಿಳಿಸಿರುತ್ತಾರೆ. ಈ ವಿಷಯದ ಬಗ್ಗೆ ವಿಚಾರಣೆ ಮಾಡಿ ವರದಿ ಸಲ್ಲಿಸುವಂತೆ ಆಯೋಗದ ಡಿವೈ.ಎಸ್.ಪಿ.ಯಾದ ಶ್ರೀ ಮಂಜುನಾಥ್ ರವರಿಗೆ ಆಯೋಗವು ಆದೇಶಿಸಿದ್ದು, ಸದರಿಯವರು ಅವರ ವರದಿಯನ್ನು ಸಲ್ಲಿಸಿರುತ್ತಾರೆ. ಸದರಿ ವರದಿಯಲ್ಲಿ ಶ್ರೀ ಚೇತನ್ ಹಿರೇಮಠ್ ಮತ್ತು ಶ್ರೀ ವಿಪಿನ್ ಗುಲ್ವಾಡಿರವರ ಹೇಳಿಕೆಯ ಪ್ರಕಾರ ಪೊಲೀಸ್ ಇನ್ಸ್‌ಪೆಕ್ಟರ್ ಶ್ರೀ ಕೇಶವ್ ಮೂರ್ತಿ ರವರನ್ನು ದಿನಾಂಕ.05.08.2019ರಂದು ಭೇಟಿ ಮಾಡಿದ್ದು, ಸದರಿಯವರು ಶ್ರೀ ಸಿದ್ದರಾಜು ಎ.ಎಸ್.ಐ ರವರನ್ನು ಭೇಟಿ ಮಾಡಿ ಎಂದು ಹೇಳಿದ್ದು, ಶ್ರೀ ಚೇತನ್ ಹಿರೇಮಠ್ ಮತ್ತು ಶ್ರೀ ವಿಪಿನ್ ಗುಲ್ವಾಡಿರವರು ಶ್ರೀ ಸಿದ್ದರಾಜು ಎ.ಎಸ್.ಐ ರವರನ್ನು ಶಿವಾಜಿನಗರದ ಕ್ವಾರ್ಟರ್ಸ್‌ನಲ್ಲಿರುವ ಮನೆಯಲ್ಲಿ ಭೇಟಿ ಮಾಡಿ ಸದರಿಯವರು ನೀಡಿರುವ ದೂರನ್ನು ಹಿಂಪಡೆಯುವಂತೆ ಮನವಿ ಮಾಡಿದ್ದು, ಶ್ರೀ ಸಿದ್ದರಾಜು ರವರು ದೂರನ್ನು ಹಿಂಪಡೆಯುವ ಪತ್ರವನ್ನು ಪೊಲೀಸ್ ಪೇದೆ ಮೂಲಕ ಕಳುಹಿಸಿಕೊಟ್ಟಿರುತ್ತಾರೆ. ಈ ಹೇಳಿಕೆಯ ಕುರಿತು ಆಯೋಗವು ಶ್ರೀ ಸಿದ್ದರಾಜು ರವರನ್ನು ಪ್ರಶ್ನಿಸಿದ್ದು, ಇದನ್ನು ಶ್ರೀ ಸಿದ್ದರಾಜು ರವರು ಅಲ್ಲಗಳೆದು ದಿನಾಂಕ.05.08.2019ರಂದು ಅವರ ಮನೆಗೆ ಯಾರು ಬಂದಿರುವುದಿಲ್ಲವೆಂದು ಹೇಳಿರುತ್ತಾರೆ. ತದನಂತರ, ದೂರುದಾರರು ದಿನಾಂಕ.04.08.2019ರಂದು

ಅವರಿಗೆ ಬಿ.ಪಿ ಮತ್ತು ನಾಡಿಮಿಡಿತ ಮಾತ್ರ ತಪಾಸಣೆ ಮಾಡಿದ್ದು, ಮದ್ಯಪಾನ ಮಾಡಿರುವ ಬಗ್ಗೆ ವೈದ್ಯಕೀಯ ತಪಾಸಣೆ ಮಾಡಿರುವುದಿಲ್ಲವೆಂದು ಹೇಳಿರುತ್ತಾರೆ. ಅದಕ್ಕೆ ಶ್ರೀ ಸಿದ್ದರಾಜು ಎ.ಎಸ್.ಐ. ರವರು ಶ್ರೀ ಅರಣ್ ಕಗ್ಗೋಡಿ ಪಿ.ಸಿ. ನಂ.14077 ರವರೊಂದಿಗೆ ಶ್ರೀ ಟ್ರಾಯ್ಡಾನ್ ಜೇಮ್ಸ್ ಕೊಲೊಕೊ ರವರನ್ನು ಅಸ್ಪತ್ರೆಗೆ ಕಳುಹಿಸಿರುತ್ತಾರೆಂದು ತಿಳಿಸಿರುತ್ತಾರೆ. ಅದ್ದರಿಂದ ಶ್ರೀ ಅರಣ್ ಕಗ್ಗೋಡಿ ಪಿ.ಸಿ. ನಂ.14077 ರವರಿಗೆ ನೋಟಿಸ್ ಜಾರಿ ಮಾಡಿದ್ದು, ದಿನಾಂಕ 20-02-2020ರಂದು ಶ್ರೀ ಸಿದ್ದರಾಜು, ಎ.ಎಸ್.ಐ, ಶ್ರೀ ಗಣೇಶ್ ಅಚಾರಿ, ಎ.ಎಸ್.ಐ, ಶ್ರೀ ಅರಣ್ ಕಗ್ಗೋಡಿ ಪಿ.ಸಿ. ನಂ.14077 ಹಾಗೂ ದೂರುದಾರರು, ಅವರ ಸಹೋದರ ಆಯೋಗದ ಮುಂದೆ ಹಾಗರಾಗಿದ್ದು, ಶ್ರೀ ಅರಣ್ ಕಗ್ಗೋಡಿ ಪಿ.ಸಿ. ನಂ.14077 ರವರು ಡಾ. ಅಂಬೇಡ್ಕರ್ ಕಾಲೇಜಿನ ಅಸ್ಪತ್ರೆಯ ವೈದ್ಯಧಿಕಾರಿ ರವರು ಶ್ರೀ ಟ್ರಾಯ್ಡಾನ್ ಜೇಮ್ಸ್ ಕೊಲೊಕೊ ರವರ ಬಿ.ಪಿ. ಹಾಗೂ ನಾಡಿ ಮಿಡಿತವನ್ನು ದಿನಾಂಕ.04.08.2019ರಂದು ಪರಿಶೀಲಿಸಿದ್ದಾರೆಂದು ಅವರು ನೋಡಿದ್ದು ಮತ್ತು ಮದ್ಯಪಾನ ಸೇವನೆಯ ಯಾವುದೇ ತಪಾಸಣೆ ಮಾಡಲಾಗಿದೆಯೇ ಅಥವಾ ಇಲ್ಲವೇ ಎಂದು ಅವರು ನೋಡಲಿಲ್ಲ ಎಂದು ಆಯೋಗದ ಮುಂದೆ ಹೇಳಿರುತ್ತಾರೆ.

ದೂರರ್ಜಿ, ವರದಿ, ದೂರುದಾರರ ಹಾಗೂ ಎದುರುದಾರರ ಹೇಳಿಕೆಗಳು ಹಾಗೂ ಪ್ರಕರಣಕ್ಕೆ ಸಂಬಂಧಪಟ್ಟ ದಾಖಲೆಗಳನ್ನು ಪರಿಶೀಲಿಸಲಾಗಿ, ಶ್ರೀ ಜಿಮ್ ಟೆರೆನ್ಸ್ ಕೊಲಾಕೊ ರವರು ಅವರ ತಾಯಿಯ ಮೊಬೈಲ್ ಕಳೆದುಹೋಗಿರುವ ಬಗ್ಗೆ ಪ್ರಕರಣ ದಾಖಲಿಸಲು ಡಿ.ಜೆ ಹಳ್ಳಿ ಪೊಲೀಸ್ ಠಾಣೆಗೆ ಶ್ರೀ ಸಾತ್ವಿಕ್‌ರವರೊಂದಿಗೆ ಹೋಗಿದ್ದು, ಡಿ.ಜೆ ಹಳ್ಳಿ ಪೊಲೀಸ್ ಠಾಣೆಯ ಪೊಲೀಸರು ಅವರ ದೂರನ್ನು ದಾಖಲಿಸದೇ ಇರುವುದು ಹಾಗೂ ದೂರಿನ ಮೇರೆಗೆ ಯಾವುದೇ ಕಾನೂನು ಕ್ರಮ ಕೈಗೊಂಡದೇ ಇರುವುದು ಶ್ರೀ ಜಿಮ್ ಟೆರೆನ್ಸ್ ಕೊಲಾಕೊ ಹಾಗೂ ಸಾಕ್ಷಿದಾರರಾದ ಶ್ರೀ ಸಾತ್ವಿಕ್‌ರವರ ಹೇಳಿಕೆಗಳಿಂದ ಕಂಡುಬರುತ್ತದೆ. ಮುಂದುವರೆದು, ದಿನಾಂಕ 04-08-2019 ರಂದು ಎನ್.ಸಿ.ಆರ್. ಸಂಖ್ಯೆ 615/2019 ರ ಪ್ರಕರಣಕ್ಕೆ ಸಂಬಂಧಿಸಿದಂತೆ ಶ್ರೀ ಜಿಮ್ ಟೆರೆನ್ಸ್ ಕೊಲಾಕೊ ರವರನ್ನು ವಿಚಾರಣೆಗೆಂದು ಠಾಣೆಯಲ್ಲೆ ಸುಮಾರು 4 ರಿಂದ 5 ಗಂಟೆಗಳ ಕಾಲ ಇರಿಸಿರುವುದು ಶ್ರೀ ಜಿಮ್ ಟೆರೆನ್ಸ್ ಕೊಲಾಕೊ ಹಾಗೂ ಸಾತ್ವಿಕ್ ರವರ ಹೇಳಿಕೆಗಳಿಂದ ಕಂಡುಬರುತ್ತದೆ. ಸದರಿ ಪೊಲೀಸ್ ಠಾಣೆಗೆ ಜಿಮ್ ಟೆರೆನ್ಸ್ ಕೊಲಾಕೊ ರವರ ಸಹೋದರನಾದ ಶ್ರೀ ಟ್ರಾಯ್ಡಾನ್ ಜೇಮ್ಸ್ ಕೊಲಾಕೊ ರವರು ಹೋಗಿದ್ದು, ಶ್ರೀ ಸಿದ್ದರಾಜು ಹಾಗೂ ಶ್ರೀ ಗಣೇಶ್ ಆಚಾರಿ ರವರು ದೂರುದಾರರಾದ ಟ್ರಾಯ್ಡಾನ್ ಜೇಮ್ಸ್ ಕೊಲಾಕೊ ರವರನ್ನು ಅವರ ಸಹೋದರನೊಂದಿಗೆ ಮಾತನಾಡಲು ಅವಕಾಶ ನೀಡದೇ, ಅವಾಚ್ಯ ಶಬ್ಧಗಳಿಂದ ಬೈದು, ಹಲ್ಲೆ ಮಾಡಿ, ಅಸಭ್ಯವಾಗಿ ನಡೆದುಕೊಂಡಿರುವುದು ದೂರುದಾರರ, ಜಿಮ್ ಟೆರೆನ್ಸ್ ಕೊಲಾಕೊ ಹಾಗೂ ಸಾತ್ವಿಕ್ ರವರುಗಳ ಹೇಳಿಕೆಗಳಿಂದ ಸ್ಪಷ್ಟವಾಗಿ ಕಂಡುಬಂದಿರುತ್ತದೆ.

ಮುಂದುವರೆದು, ಶ್ರೀ ಟ್ರಾಯ್ಡಾನ್ ಜೇಮ್ಸ್ ಕೊಲಾಕೊ ರವರನ್ನು ವೈದ್ಯಕೀಯ ತಪಾಸಣೆಗೆ ಒಳಪಡಿಸಿದ್ದು, ಡಾ. ಸುಧಾಕರ್ ರವರು ದೂರುದಾರರನ್ನು ವೈದ್ಯಕೀಯ ತಪಾಸಣೆ ಮಾಡಿ ಆತ "Patient under the influence of alcohol" ಎಂದು ಅಭಿಪ್ರಾಯವನ್ನು ನೀಡಿರುತ್ತಾರೆಂದು ಪೊಲೀಸ್ ಅಧಿಕಾರಿಗಳು ಅವರ ಹೇಳಿಕೆಗಳಲ್ಲಿ ಹೇಳಿರುತ್ತಾರೆ. ಆದರೆ, ಡಾ. ಸುಧಾಕರ್ ರವರು ಅವರ ಹೇಳಿಕೆಯಲ್ಲಿ ಅವರು ದೂರುದಾರರನ್ನು ತಪಾಸಣೆ ಮಾಡಿರುವುದಿಲ್ಲವೆಂದು ಹಾಗೂ ಲಭ್ಯವಿರುವ ಕಿರಿಯ ವೈದ್ಯರಲ್ಲಿ ಒಬ್ಬರು, ಟ್ರಾಯ್ಡಾನ್ ಜೇಮ್ಸ್ ರವರನ್ನು ಪರೀಕ್ಷಿಸಿ ಡಾ.ಸುಧಾಕರ್ ರವರ ಪರವಾಗಿ ಸಹಿ ಮಾಡಿ, "Patient under the influence of alcohol" ಎಂದು ಅಭಿಪ್ರಾಯವನ್ನು ನೀಡಿದ್ದು, ಆ ಸಮಯದಲ್ಲಿ ಕಿರಿಯ ವೈದ್ಯರು ಯಾರೆಂಬುದು ಅವರಿಗೆ ತಿಳಿದಿಲ್ಲವೆಂದು ನುಡಿದಿರುತ್ತಾರೆ. ಮುಂದುವರೆದು, ಶ್ರೀ ಅರುಣ್ ಕಗ್ಗೋಡಿ, ಪಿ.ಸಿ. ರವರು ಅವರ ಹೇಳಿಕೆಯಲ್ಲಿ ದೂರುದಾರರ ಬಿ.ಪಿ ಹಾಗೂ ನಾಡಿ ಮಿಡಿತ ಮಾತ್ರ ತಪಾಸಣೆ ಮಾಡಿರುವುದನ್ನು ನೋಡಿರುವುದಾಗಿ ಹಾಗೂ ಮದ್ಯಪಾನ ಸೇವನೆಯ ಯಾವುದೇ ತಪಾಸಣೆ ಮಾಡಲಾಗಿದೆಯೇ ಅಥವಾ ಇಲ್ಲವೇ ಎಂಬುದರ ಬಗ್ಗೆ ತಿಳಿದಿಲ್ಲವೆಂದು ನುಡಿದಿದ್ದು, ಡಾ. ಸುಧಾಕರ್ ಹಾಗೂ ಅರುಣ್ ಕಗ್ಗೋಡಿರವರ ಹೇಳಿಕೆಯ ಪ್ರಕಾರ ದೂರುದಾರರು ಮದ್ಯಸೇವನೆ ಮಾಡಿರುವುದನ್ನು ದೃಢಪಡಿಸಲು ಯಾವುದೇ ತಪಾಸಣೆ ಮಾಡಿರುವುದು ಮೇಲ್ನೋಟಕ್ಕೆ ಕಂಡುಬಂದಿರುವುದಿಲ್ಲ. ಮುಂದುವರೆದು, ದೂರುದಾರರ ವಿರುದ್ಧ ಮೊ.ಸ. ಸಂಖ್ಯೆ 196/2019 ಕಲಂ 504, 353 ಐಪಿಸಿ ರೀತ್ಯ ಪ್ರಕರಣ ದಾಖಲಿಸಿ ಮ್ಯಾಜಿಸ್ಟ್ರೇಟ್ ರವರ ಮುಂದೆ ಏನನ್ನೂ ಹೇಳಬಾರದೆಂದು ತಿಳಿಸಿ ಮ್ಯಾಜಿಸ್ಟ್ರೇಟ್ ರವರ ಮುಂದೆ ಹಾಜರುಪಡಿಸಿರುವುದಾಗಿ ದೂರುದಾರರಾದ ಶ್ರೀ ಟ್ರಾಯ್ಡಾನ್ ಜೇಮ್ಸ್ ಕೊಲಾಕೊ ರವರ ಹೇಳಿಕೆಯಿಂದ ಕಂಡುಬರುತ್ತದೆ.

ಒಟ್ಟಾರೆಯಾಗಿ ಅರ್ಜಿದಾರರ ದೂರಿಗೆ ಸಂಬಂಧಿಸಿದಂತೆ ವಿಚಾರಣೆ ಕಾಲದಲ್ಲಿ ದಾಖಲಿಸಿಕೊಳ್ಳಲಾದ ಮೇಲ್ಕಂಡ ಎಲ್ಲಾ ಸಾಕ್ಷೀದಾರರುಗಳ ಹೇಳಿಕೆ ಮತ್ತು ಸಂಗ್ರಹಿಸಲಾದ ದಾಖಲಾತಿಗಳು ಹಾಗೂ ವೈದ್ಯರ ವೈದ್ಯಕೀಯ ಪ್ರಮಾಣ ಪತ್ರದ ಪರಿಶೀಲನೆಯಿಂದ ಡಿ.ಜೆ. ಹಳ್ಳಿ ಪೊಲೀಸ್ ಠಾಣೆಯ ಎ.ಎಸ್.ಐಗಳಾದ ಶ್ರೀ ಸಿದ್ದರಾಜು ಹಾಗೂ ಗಣೇಶ್ ಆಚಾರಿ ರವರುಗಳು ಅವರ ಕರ್ತವ್ಯ ನಿರ್ವಹಿಸುವಲ್ಲಿ ಕರ್ತವ್ಯ ದುರುಪಯೋಗ ಪಡೆಸಿಕೊಂಡಿರುವುದು ಹಾಗೂ ಶ್ರೀ ಕೇಶವ ಮೂರ್ತಿ, ಪೊಲೀಸ್ ಇನ್ಸಪೆಕ್ಟರ್ ರವರು ಸರಿಯಾದ ವಿಚಾರಣೆ ಮಾಡದೇ ಕರ್ತವ್ಯ ನಿರ್ಲಕ್ಷತನ ತೋರಿರುವುದು ಸ್ಪಷ್ಟವಾಗಿ ಕಂಡುಬರುತ್ತದೆ.

ಆದ್ದರಿಂದ, ಡಿ.ಜೆ. ಹಳ್ಳಿ ಪೊಲೀಸ್ ಠಾಣೆಯ ಎ.ಎಸ್.ಐಗಳಾದ ಶ್ರೀ ಸಿದ್ದರಾಜು ಹಾಗೂ ಶ್ರೀ ಗಣೇಶ್ ಆಚಾರಿ ರವರು ಅವರ ಕರ್ತವ್ಯ ನಿರ್ವಹಿಸುವಲ್ಲಿ ಕರ್ತವ್ಯ ದುರುಪಯೋಗ ಪಡೆಸಿಕೊಂಡಿರುವುದು ಕಂಡುಬರುವುದರಿಂದ ಕೆಎಸ್‌ಪಿ (ಡಿಪಿ) ನಿಯಾಮವಳಿ 1965 ರ ಅನ್ವಯ ಇಲಾಖಾ ವಿಚಾರಣೆ ನಡೆಸುವಂತೆ ಹಾಗೂ ಪೊಲೀಸ್ ನಿರೀಕ್ಷಕರಾದ ಶ್ರೀ ಕೇಶವ ಮೂರ್ತಿರವರು ಕರ್ತವ್ಯ ನಿರ್ವಹಿಸುವಲ್ಲಿ ಕರ್ತವ್ಯ ನಿರ್ಲಕ್ಷತೆ ಎಸಗಿರುವುದು ಕಂಡುಬರುವುದರಿಂದ ಅವರ ಮೇಲೆ ಸೂಕ್ತ ಕಾನೂನು ಕ್ರಮ ಕೈಗೊಳ್ಳುವಂತೆ ಡಿಜಿ ಮತ್ತು ಐಜಿಪಿ, ಬೆಂಗಳೂರು ರವರಿಗೆ ಶಿಫಾರಸ್ಸು ಮಾಡಲಾಗಿದೆ.

ಆದೇಶದ ಪ್ರತಿಯನ್ನು ಡಿಜಿ ಮತ್ತು ಐಜಿಪಿ, ಬೆಂಗಳೂರು ರವರಿಗೆ ಸೂಕ್ತ ಕ್ರಮಕ್ಕಾಗಿ ಕಳುಹಿಸುವುದು.

ಮೇಲ್ಕಂಡ ಶಿಫಾರಸ್ಸನ್ನು ಮಾನವ ಹಕ್ಕುಗಳ ರಕ್ಷಣಾ ಅಧಿನಿಯಮ 1993, ಕಲಂ 18(ಇ) ಪ್ರಕಾರ ಶಿಫಾರಸ್ಸಿನ ಪ್ರತಿ ತಲುಪಿದ ಒಂದು ತಿಂಗಳ ಒಳಗಾಗಿ ಅನುಪಾಲನಾ ವರದಿಯನ್ನು ಡಿಜಿ ಮತ್ತು ಐಜಿಪಿ, ಬೆಂಗಳೂರು ರವರು ಆಯೋಗಕ್ಕೆ ಸಲ್ಲಿಸತಕ್ಕದ್ದು ಮತ್ತು ಶಿಫಾರಸ್ಸಿನಿಂದ ಬಾಧಿತರಾದ ಪೊಲೀಸ್ ಸಿಬ್ಬಂದಿರವರು ನಿಯಮ 22 ಕರ್ನಾಟಕ ರಾಜ್ಯ ಮಾನವ ಹಕ್ಕುಗಳ ಆಯೋಗ (ಪ್ರಕ್ರಿಯೆ) ನಿಯಮಾವಳಿ 2007 ರಂತೆ ಅಭಿಪ್ರಾಯ/ಶಿಫಾರಸ್ಸನ್ನು ತಿದ್ದುಪಡಿಗೆ ಅಥವಾ ಮರು ಪರಿಶೀಲನೆಗೆ ಅರ್ಜಿಯನ್ನು ಆಯೋಗಕ್ಕೆ ಸಲ್ಲಿಸಿದರೆ ಅದನ್ನು ನಿಯಮಾನುಸಾರ ಪರಿಶೀಲನೆ ಮಾಡಲಾಗುವುದೆಂದು ಅಭಿಪ್ರಾಯ/ಶಿಫಾರಸ್ಸು ಮಾಡಲಾಗಿದೆ.

ಪ್ರಕರಣವನ್ನು ದಿನಾಂಕ 25-05-2021 ರಂದು ಅನುಪಾಲನಾ ವರದಿಗಾಗಿ ಮಂಡಿಸುವುದು.

Sd/-
(ಆರ್. ಕೆ. ದತ್ತ)
ಸದಸ್ಯರು

ಜಿ.ಎಸ್.